# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 124 (187) |
| ಸದಸ್ಯರ ಹೆಸರು | : | ಡಾ: ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.09.2021 |
| ಉತ್ತರಿಸುವವರು | : | ಅರಣ್ಯ, ಆಹಾರ ಹಾಗೂ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಅರಣ್ಯ ಭೂಮಿ 1947 ರಿಂದ ಈವರೆಗೆ ಎಷ್ಟು | ರಾಜ್ಯದಲ್ಲಿರುವ ಅರಣ್ಯ ಭೂಮಿ 1947 ರಿಂದ ಈವರೆಗೆ ಒಟ್ಟು ಅರಣ್ಯ ಪ್ರದೇಶ 42,19,163 ಹೆಕ್ಟೇರ್ ಇರುತ್ತದೆ. |
| (ಆ) | ಅರಣ್ಯದಲ್ಲಿ ಆವರಿಸಿರುವ ಲಂಟಾನ ಬೇಲಿಯಂತಹ ಗಿಡಗಳಿಂದ ಹರಡುವ ಬೆಂಕಿ ಅನಾಹುತ ತಡೆಯಲು ಯಾವ ಕ್ರಮವಹಿಸಲಾಗಿದೆ: | ಅರಣ್ಯ ಪ್ರದೇಶಗಳಲ್ಲಿ ಆವರಿಸಿರುವ ಲಂಟಾನ ಹಾಗೂ ಇತರೆ ಕಳೆಗಳನ್ನು ಬೇರು ಸಹಿತ ಕಿತ್ತು ತೆಗೆಯಲು ಕ್ರಿಯಾ ಯೋಜನೆ ರೂಪಿಸಿಕೊಂಡು ಲಂಟಾನ ಕಳೆ ತೆಗೆಯಲಾಗುತ್ತಿದೆ ಹಾಗೂ ಅರಣ್ಯದಲ್ಲಿ ಬೆಂಕಿ ರೇಖೆ ನಿರ್ಮಿಸಿ ಕಾಡ್ಗಿಚ್ಚು ಹರಡುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗುತ್ತಿದೆ.<br><br>1. ಅವಶ್ಯಕತೆ ಇರುವ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಬೆಂಕಿ ಸಾಲುಗಳ ನಿರ್ಮಾಣ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ.<br>2. ಬೆಂಕಿ ಕಾವಲುಗಾರರನ್ನು ನಿಯೋಜಿಸಿಕೊಂಡು ಅರಣ್ಯ ಪ್ರದೇಶದಲ್ಲಿ ಬೆಂಕಿ ಅನಾಹುತಗಳನ್ನು ತಡೆಗಟ್ಟಲಾಗುತ್ತಿದೆ.<br>3. ಅರಣ್ಯ ಪ್ರದೇಶದಲ್ಲಿ ಬೆಂಕಿ ಬೀಳದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>4. ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಬೆಂಕಿ ರಕ್ಷಣೆಯ ಬಗ್ಗೆ ತರಬೇತಿ ಮತ್ತು ಕಾರ್ಯಗಾರ ಏರ್ಪಡಿಸಲಾಗುತ್ತಿದೆ. |
| (ಇ) | ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹೆಚ್ಚುವರಿಯಾಗಿ ಲಭಿಸಿರುವ ಸರ್ಕಾರಿ ಭೂಮಿ ಪ್ರಮಾಣವೆಷ್ಟು: | ಅಧಿಸೂಚಿತ ಅರಣ್ಯ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಸುಮಾರು 3,30,187 ಹೆಕ್ಟೇರ್ ಸರ್ಕಾರಿ ಭೂಮಿಯನ್ನು ಪರಿಭಾವಿತ ಅರಣ್ಯ ಪ್ರದೇಶವೆಂದು ಗುರುತಿಸಲಾಗಿರುತ್ತದೆ. |
| (ಈ) | ಅರಣ್ಯಗಳಲ್ಲಿ ವಿವಿಧ ಪ್ರಭೇದಗಳ ವನರಾಶಿ ಇದೆಯೇ: ಅವುಗಳು ಯಾವುವು: (ವನ್ಯಜೀವಿಗಳ ಸಂಖ್ಯೆ ಹಾಗೂ ಹೆಚ್ಚಿದ ವಿವರ ನೀಡುವುದು) | ಹೌದು, ನಿತ್ಯ ಹರಿದ್ವರ್ಣ ಕಾಡುಗಳು, ಅರೆ ನಿತ್ಯ ಹರಿದ್ವರ್ಣದ ಕಾಡುಗಳು, ಹಚ್ಚ ಹಸಿರಿನ ಕಾಡುಗಳು, ಕುರುಚಲು ಅರಣ್ಯ ಪ್ರದೇಶ, ಶೋಲಾ ಅರಣ್ಯ ಪ್ರದೇಶ, ಎಲೆ ಉದುರುವ ಕಾಡುಗಳು ಮತ್ತು ತೇವಾಂಶದಿಂದ ಕೂಡಿದ ಅರಣ್ಯ ಪ್ರದೇಶಗಳಿರುತ್ತವೆ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವತಿಯಿಂದ ವನ್ಯಪ್ರಾಣಿಗಳ ಗಣತಿಯನ್ವಯ ಈ ಕೆಳಕಂಡ ವನ್ಯಪ್ರಾಣಿಗಳು ಇರುವುದಾಗಿ ಅಂದಾಜಿಸಲಾಗಿದೆ.<br><br>ಹುಲಿ-524,<br>ಆನೆ-6047,<br>ಇತರೆ ವನ್ಯಪ್ರಾಣಿ ಹಾಗೂ ಸಸ್ತನಿಗಳು.<br><br>ವನ್ಯಜೀವಿ ವಿಭಾಗಗಳು ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿ ವನ್ಯಧಾಮಗಳು ಹೆಚ್ಚಳವಾಗಿದ್ದರಿಂದ ವನ್ಯಪ್ರಾಣಿಗಳಾದ ಹುಲಿ, ಆನೆ, ಚಿರತೆ, ಕಾಡುಕೋಣ, ಜಿಂಕೆ, ಕಡವೆ, ಕರಡಿ, ಕಾಡುನಾಯಿ, ಕಾಡುಹಂದಿ, ಮುಳ್ಳುಹಂದಿ ಹಾಗೂ ಇನ್ನಿತರೆ ಪ್ರಾಣಿಗಳು ಅಂದಾಜು ಶೇ.60 ರಷ್ಟು ಹೆಚ್ಚಳವಾಗಿರುತ್ತದೆ. |

| | | |
|---|---|---|
| (ಉ) | ನೀಲಗಿರಿ ಹಾಗೂ ಕಳೆ ಹಾವಳಿ ತಡೆಯಲು ವಹಿಸಿರುವ ನೈಸರ್ಗಿಕ ವಿಧಾನ ಯಾವುವು? | 1. <u>ವನ್ಯಜೀವಿ ಪ್ರದೇಶಗಳು:</u> ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಲಂಟಾನ ಯುಪಟೋರಿಯಂ ಕಳೆಗಳನ್ನು ಬುಡ ಸಮೇತ ತೆಗೆದು ಸದರಿ ಪ್ರದೇಶದಲ್ಲಿ ಹುಲ್ಲುಗಾವಲು ಅಭಿವೃದ್ಧಿ ಪಡಿಸಿ ಸದರಿ ಹುಲ್ಲುಗಾವಲು ಪ್ರದೇಶಗಳನ್ನು ಪ್ರತಿ ವರ್ಷ ನಿರ್ವಹಣೆ ಮಾಡಲಾಗುತ್ತಿದೆ. ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಧಾಮಗಳಲ್ಲಿ ಯಾವುದೇ ನೀಲಗಿರಿ ಮರಗಳನ್ನು ಕಡಿದಿರುವುದಿಲ್ಲ. ಹಾಗೂ ಕಳೆಗಳ ಹಾವಳಿ ತಡೆಯಲು ಲಂಟಾನ ಹಾಗೂ ಇತರೆ ಕಳೆಗಳನ್ನು ಬುಡಸಮೇತ ತೆಗೆದಯ ಸ್ಥಳೀಯವಾಗಿ ದೊರೆಯುವ ಮೇವು ನೀಡುವ ಹುಲ್ಲನ್ನು ಬೆಳೆಸಲು ಕ್ರಮವಹಿಸಲಾಗುತ್ತಿದೆ.<br><br>2. <u>ಇತರೆ ಅರಣ್ಯ ಪ್ರದೇಶಗಳಲ್ಲಿ:</u> ಸರ್ಕಾರದ ಆದೇಶ ಸಂಖ್ಯೆ:ಅಪಜೀ 41 ಎಫ್ಎಪಿ 2017, ದಿನಾಂಕ:25.02.2017ರನ್ವಯ ನೀಲಗಿರಿ ಮರಗಳನ್ನು ಬೆಳೆಸಲು ನಿರ್ಬಂಧವಿರುವುದರಿಂದ ಸದರಿ ಮರಗಳನ್ನು ಬೆಳಸಲಾಗುತ್ತಿಲ್ಲ. ಸ್ವಾಭಾವಿಕ ಅರಣ್ಯ ಪ್ರದೇಶಗಳಲ್ಲಿ ಕಳೆ ತಡೆಯಲು ನಿರ್ದಿಷ್ಟ ಕಾರ್ಯಕ್ರಮಗಳು ಇರುವುದಿಲ್ಲ. ನೆಡುತೋಪುಗಳಲ್ಲಿ ಮಾತ್ರ ಮಾನವ ಸಂಪನ್ಮೂಲ ಉಪಯೋಗಿಸಿಕೊಂಡು ಕಳೆ ತೆಗೆಯಲಾಗುತ್ತಿದೆ. |

ಸಂಖ್ಯೆ: ಅಪಜೀ 114 ಎಫ್ಎಎಫ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು
ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು